ಅ) ಮನೆ ಮನೆ ಸಮೀಕ್ಷಿಸುವ ಕಾರ್ಯಕ್ರಮದ ಉದ್ದೇಶಿತ ಪ್ರಸ್ತಾವನೆಯ ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ. ಈ ಸಮೀಕ್ಷೆಯಲ್ಲಿ ಉಳಿದಿರುವ ನಕಲಿ ಕಾರ್ಡುಗಳನ್ನು ಪತ್ತೆ ಮಾಡಿ ರದ್ದು ಪಡಿಸಲು ಉದ್ದೇಶಿಸಲಾಗಿದೆ.

**ಬೆಂಗಳೂರು ಮಹಾನಗರದಲ್ಲಿ ಸಂಚಾರಿ ಸುವ್ಯವಸ್ಥೆ**

302 (297) ಶ್ರೀ ಕುಂಬೈ ಸುಂದರರಾವ್ (ಸುರತ್ಕಲ್) : ಮಾನ್ಯ ಬೆಂಗಳುರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಂಗಳೂರು ಮಹಾನಗರದಲ್ಲಿನ ಸಂಚಾರ ಸುವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ನಗರದ ಯಾವ ಯಾವ ಕಡೆಗಳಲ್ಲಿ ಮೇಲೆ ಸೇತುವೆ (ಫ್ಲೈ ಓವರ್) ಗಳನ್ನು ನಿರ್ಮಿಸಲು ಯೋಜಿಸಲಾಗಿದೆ?

ಆ) ಯೋಜಿಸಲಾದ ಯಾವ ಕಾಮಗಾರಿಗಳನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ. ಇನ್ನೂಳಿದವುಗಳನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಅನಂತನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು) :

ಅ) ಬೆಂಗಳೂರು ನಗರದ ಸಂಚಾರ ಸುವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಈ ಕೆಳಕಂಡ 7 ಸ್ಥಳಗಳಲ್ಲಿ ಮೇಲೆ ಸೇತುವೆಯನ್ನು ನಿರ್ಮಿಸಲು ಉದ್ದೇಶಿಸಿದೆ:

1. ಟೌನ್ ಹಾಲಿನಿಂದ ಸಿರ್ಸಿ ವೃತ್ತದವರೆಗೆ ಮೇಲೆ ಸೇತುವೆ ನಿರ್ಮಾಣ.

2. ಹಡ್ಸನ್ ವೃತ್ತದಿಂದ ಟೌನ್ ಹಾಲ್‌ವರೆಗೆ ಸಬ್‌ವೇ ಸಹಿತ ಮೇಲ್ ಸೇತುವೆ ನಿರ್ಮಾಣ.

3. ರಿಚ್‌ಮಂಡ್ ವೃತ್ತದಲ್ಲಿ ಗ್ರೇಡ್‌ಸೆಪರೇಟರ್ ಹಾಗೂ ಮೇಲ್‌ಸೇತುವೆ ನಿರ್ಮಾಣ

4. ಮಹಾರಾಣಿ ಕಾಲೇಜಿನಿಂದ ರಾಜಾಜಿನಗರ ಪ್ರವೇಶದ್ವಾರದವರೆಗೆ ಕಾರಿಡಾರ್ ಅಭಿವೃದ್ಧಿ

5. ಟ್ರಿನಿಟಿ ವೃತ್ತದಲ್ಲಿ ಮೇಲ್‌ಸೇತುವೆ ನಿರ್ಮಾಣ.

6. ಸುಭಾಷನಗರದ ಶಾಂತಲಾ ಸಿಲ್ಕ್ ಹೌಸ್‌ನಿಂದ ಮಾಗಡಿ ರಸ್ತೆಗೆ ಪಶ್ಚಿಮ ಕಾರ್ಡ್ ರಸ್ತೆಗೆ ಮೇಲ್ ಸೇತುವೆ ನಿರ್ಮಾಣ.

7. ಮೇಖ್ರಿ ವೃತ್ತದಲ್ಲಿ ಮೇಲ್‌ಸೇತುವೆ ನಿರ್ಮಾಣ.

ಆ) ಯೋಜಿಸಲಾದ ಕಾಮಗಾರಿಗಳ ಪೈಕಿ ಸಿರ್ಸಿ ವೃತ್ತದಿಂದ ಟೌನ್ ಹಾಲ್‌ವರೆಗಿನ ಮೇಲ್ ಸೇತುವೆ ಕಾಮಗಾರಿಯು ಈಗಾಗಲೇ ಪ್ರಗತಿಯಲ್ಲಿದೆ. ರಿಚ್ ಮಂಡ್ ವೃತ್ತದ ಗ್ರೇಡ್ ಸೆಪರೇಟರ್ ಕಾಮಗಾರಿಯು ಈಗ ಅನುಮೋದಿಸಿಲ್ಬಟ್ಟಿದ್ದು, ಗುತ್ತಿಗೆದಾರರೊಂದಿಗೆ ಕರಾರನ್ನು ಮಾಡಿಕೊಂಡ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಉಳಿದ ಕಾಮಗಾರಿಯನ್ನು ಹಂತ ಹಂತವಾಗಿ ಸಂಪನ್ಮೂಲಗಳ ಲಭ್ಯತೆಯ ಆಧಾರದ ಮೇಲೆ ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳಲಾಗುವುದು.